
# ಬ್ರೈಡಲ್ ಕ್ರೀಪರ್





ಚಿತ್ರಬರಹ:
**ಡಾ. ಎಂ. ವಸುಂಧರ**

ನವವಧುವಿನ ಕೈಯಲ್ಲಿರುವ ಪುಷ್ಪಗುಚ್ಛದಂತೆ ಕಂಡುಬರುವ ಈ ಬಳ್ಳಿಯ ಹೂಗಳು ಸುಗಂಧ ಭರಿತ ಹೂ ಗೊಂಚಲುಗಳನ್ನು ಹೊಂದಿರುತ್ತದೆ. ಇದು ರೆಂಬೆಕೊಂಬೆಗಳಿಂದ ಕೂಡಿದ ಗಡುತರವಾದ ಬಳ್ಳಿ. ಅಗಲವಾದ, ದಟ್ಟ ಹಸಿರಿನ ಹೃದಯಾಕಾರದ (7–8 ಸೆಂ.ಮೀ ಉದ್ದ, 3–4 ಸೆಂ.ಮೀ. ಅಗಲ) ಎಲೆಗಳು. ಇಂತಹ ಎಲೆಗಳೊಂದಿಗೆ ಸುಗಂಧಭರಿತ ಬಿಳಿಯ ಪುಷ್ಪ ಗುಚ್ಛವೂ ಸೇರಿದರೆ ಅದರ ಸೌಂದರ್ಯ ವರ್ಣಿಸಲಸದಳ. ಬಿಳಿಯ ಬಣ್ಣವಿದ್ದು, ಪುಟ್ಟ ಪುಟ್ಟ ಹೂಗಳಿಂದ ತುಂಬಿದ ಗೊಂಚಲುಗಳು ಬಳ್ಳಿಯಿಂದ ಇಳಿಬಿದ್ದಿರುತ್ತವೆ. ತುದಿ ಮೊನಚು, ಮೇಲೆ ನಯ. ಆದರೆ ಎಲೆಯ ತಳದ ಮೇಲೆ ತುಪ್ಪಳ ಇದೆ. ಹೂ ಗೊಂಚಲುಗಳನ್ನು 'ಬ್ರೈಡಲ್ ಬೊಕೆ' ಎಂದೂ ಕರೆಯುತ್ತಾರೆ. ವಧೂವರರಿಗೆ ತುರಾಯಿ ಕಟ್ಟಿ ಕೊಡಲು ಇದು ಅತ್ಯಂತ ಸೂಕ್ತವಾದ ಹೂಗೊಂಚಲು. ವರ್ಷವಿಡೀ ಹೂ ಬಿಡುವುದು.

ಈ ಬಳ್ಳಿಯ ಸಸ್ಯ ಶಾಸ್ತ್ರೀಯ ನಾಮಧೇಯ ಪೊರಾನ ಪ್ಯಾನಿಕ್ಯುಲೇಟ. ಭಾರತದ್ದೇ ಆದ ಈ ಬಳ್ಳಿಯು ಕನ್‌ವಾಲ್ವುಲೇಸಿ ಕುಟುಂಬಕ್ಕೆ ಸೇರಿದೆ. ಪ್ರತಿ ಹೂವು ನಳಿಕೆ ಆಕಾರದಲ್ಲಿರುತ್ತವೆ. ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿ ದಂಡಿಯಾಗಿ ಹೂ ಬಿಡುತ್ತವೆ.

ಪೊರಾನ ಜಾತಿಯಲ್ಲಿ ಇನ್ನೆರಡು ಪ್ರಭೇದಗಳು ಕಂಡು ಬರುತ್ತವೆ. ಮೊದಲನೆಯದು ಪೊರಾನ ರೆಸಿಮೋಸ. ಈ ಬಳ್ಳಿಯ ಮೂಲವೂ ಭಾರತ ಹಾಗೂ ಮ್ಯಾನ್ಮಾರ್. ಪೊರಾನ ರೆಸಿಮೋಸವು ವಾರ್ಷಿಕ ಬಳ್ಳಿಯಾಗಿದ್ದು, ಇದರ ಎಲೆಗಳು ಪೊರಾನ ಪ್ಯಾನಿಕ್ಯುಲೇಟಗಿಂತ ಚಿಕ್ಕದಿದ್ದು, ಈ ಬಳ್ಳಿಯನ್ನು ಮಂಜುಬಳ್ಳಿ ಯೆಂದೂ ಕರೆಯುತ್ತಾರೆ. ಆದರೆ ಹೂವು ನಕ್ಷತ್ರಾಕಾರದಲ್ಲಿರುತ್ತವೆ.

ಇನ್ನೊಂದು ಪ್ರಭೇದ ಪೊರಾನ ವಾಲ್ಯೂಬಿಲಿಸ್. ಈ ಬಳ್ಳಿಯ ಮೂಲ ಬರ್ಮಾ ಮತ್ತು ಮಲೇಷ್ಯಾ. ಈ ಬಳ್ಳಿಯೂ ಕೂಡ ರೆಂಬೆಕೊಂಬೆಗಳಿಂದ ಸಮೃದ್ಧವಾಗಿದ್ದು ಬಿಳಿಯ ಹೂಗಳಿಂದ ಕೂಡಿರುತ್ತವೆ. ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಹೂಗಳನ್ನು ಕಾಣಬಹುದು. ಸುವಾಸಿತ ಹೂಗಳಿಲ್ಲದೆ ಈ ಬಳ್ಳಿಯ ಕಷಾಯವನ್ನು ಸುಸೂತ್ರವಾಗಿ ಹೆರಿಗೆಯಾಗಲು ನೀಡಲಾಗುತ್ತದೆ.

ಈ ಬಳ್ಳಿಗಳನ್ನು ಕಾಂಡದ ತುಂಡುಗಳಿಂದ ವೃದ್ಧಿ ಮಾಡಬಹುದು. ನೆಟ್ಟ 2–3 ತಿಂಗಳಲ್ಲೇ ಬಹುಬೇಗ ಬೆಳೆದು ಹೂ ಗೊಂಚಲುಗಳನ್ನು ನೀಡಬಲ್ಲುದು. ಹೆಚ್ಚಿನ ಆರೈಕೆ ಅಥವಾ ಪೋಷಣೆ ಬಯಸದೆ ಬೆಳೆಯುವ ಬಳ್ಳಿಗಳಿವು. ಬಳ್ಳಿಗಳನ್ನು ಗೋಡೆಗಳ ಮೇಲೆ ಟ್ರೆಲ್ಲಿಸ್‌ಗಳನ್ನು ಮುಚ್ಚಲು ಬೆಳೆಸಬಹುದು. ಪೊರಾನ ಜಾತಿಯಲ್ಲಿ ಆರು ಹೊದರು ಬಳ್ಳಿಗಳು ಕಂಡುಬರುತ್ತವೆ.

ಬಳ್ಳಿಗಳನ್ನು ನೆಡಲು ಸೂಕ್ತ ಕಾಲ ಇತರ ಗಿಡಗಳಂತೆಯೇ ವಸಂತ ಋತು. ಆದರೆ ವಸಂತ ಕಾಲಕ್ಕೂ ಮಳೆಗಾಲಕ್ಕೂ ಮಧ್ಯೆ ಬಿಸಿಗಾಳಿ ಬೀಸುವುದೂ ಉಂಟು. ಅಲ್ಲದೆ ನೀರಿನ ಅಭಾವವೂ ಕಾಡುತ್ತದೆ. ಆದ್ದರಿಂದ ಬಳ್ಳಿಗಳನ್ನು ಜೂನ್ ತಿಂಗಳಲ್ಲಿ ನೆಡುವುದು ಪದ್ಧತಿ.